3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.158/2021**

ಪ್ರಾ.ಸಾ 7

ಚಾ.ಸಾ 11

| | |
|---|---|
| ಹೆಸರು | ಪ್ರಸಾದ್.ಜಿ.ಎಲ್. |
| ತಂದೆಯ ಹೆಸರು | ಲಕ್ಷ್ಮೀನರಸಪ್ಪ |
| ವಯಸ್ಸು | 35 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ದೊಡ್ಡಗಾಲಿಹಳ್ಳಿ |

ಸಾಕ್ಷಿಯನ್ನು ದಿನಾಂಕ 03.01.2026 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಮೃತ ಸಂಜೀವರಾಯಪ್ಪರವರು ನನ್ನ ಸೋದರಅತ್ತೆಯ ಮಗ. ದಿಃ 18.11.2019 ರಂದು ನಾನು ಬೆಂಗಳೂರಿನಲ್ಲಿದ್ದಾಗ ನಮ್ಮ ಸಂಬಂಧಿಕರು ನನಗೆ ಕರೆ ಮಾಡಿ ಸಂಜೀವರಾಯಪ್ಪರವರು ನೇಣು ಹಾಕಿಕೊಂಡು ಮೃತಪಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ಕೂಡಲೇ ನಾನು ಸಂಜೀವರಾಯಪ್ಪರವರ ಮನೆಗೆ ಬಂದಿರುತ್ತೇನೆ. ನಾನು ಸ್ಥಳಕ್ಕೆ ಬಂದ ನಂತರ ದಿಃ 17.11.2019 ರಂದು ಸಂಜೀವರಾಯಪ್ಪ ಮತ್ತು ಅವರ ಗ್ರಾಮದ ನರಸಪ್ಪ ಮತ್ತು ಮಂಜುನಾಥರವರು ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 8 ಗಂಟೆವರೆಗೆ ಆತನೊಂದಿಗೆ ಗಲಾಟೆ ಮಾಡಿ ಹೊಡೆದಿದ್ದು ಆತನು ಮನೆಗೆ ಬಂದ ನಂತರವೂ ಸಹ ಆರೋಪಿತರು ಆತನ ಮನೆಗೆ ಬಂದು ಪುನಃ ಹೊಡೆದು ಬೈದು ಹೋಗಿದ್ದು, ಆದ್ದರಿಂದ ಆತನು ಮನನೊಂದು ಅವಮಾನವನ್ನು ಸಹಿಸಲಾರದೇ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆಂದು ನನಗೆ ತಿಳಿದುಬಂದಿರುತ್ತದೆ. ಸ್ಥಳದಲ್ಲಿದ್ದ ಸ್ಥಳೀಯರು ಮೃತ

ದೇಹದ ಹತ್ತಿರ ಒಂದು ಚೀಟಿ ಸಿಕ್ಕಿದ್ದು ಅದನ್ನು ಓದಲು ಲಕ್ಷ್ಮೀನಾರಾಯಣಪ್ಪರವರಿಗೆ ಕೊಟ್ಟಾಗ ಅವರು ಮೃತನ ಸಾವಿಗೆ ಆರೋಪಿತರು ಕಾರಣ ಎಂದು ಓದಿ ಹೇಳಿದ ನಂತರ ಚೀಟಿಯನ್ನು ಹರಿದು ಹಾಕಿರುತ್ತಾರೆ ಎಂದು ನನಗೆ ತಿಳಿಸಿದರು.

2) ನಾನು ಸ್ಥಳದಲ್ಲಿದ್ದಾಗ ಮಿಡಿಗೇಶಿ ಪೊಲೀಸರು ಬಂದಿದ್ದು, ಚೂರಾಗಿದ್ದ ಚೀಟಿಗಳನ್ನು ಅವರು ವಶಕ್ಕೆ ತೆಗೆದುಕೊಂಡಿರುತ್ತಾರೆ. ಈ ವಿಚಾರವನ್ನು ಮಧುಗಿರಿ ಸರ್ಕಾರಿ ಆಸ್ಪತ್ರೆಯಲ್ಲಿ ನಾನು ವೃತ್ತ ನಿರೀಕ್ಷಕರಿಗೆ ತಿಳಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ.B.K.P.S. ವಕೀಲರಿಂದ :**

3) ನಮ್ಮ ಊರಿನಿಂದ ಗೂಲಹಳ್ಳಿ ಗ್ರಾಮಕ್ಕೆ ಸುಮಾರು 10 ಕಿ.ಮಿ. ದೂರ ಇರುತ್ತದೆ. ನಾನು 2010 - 11 ರಿಂದ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದೇನೆ. ನನ್ನ ಮಾವ ಬಸ್ತಪ್ಪರವರು ಎರಡನೇ ಮದುವೆಯಾದ ನಂತರ ಗೂಲಹಳ್ಳಿಯಲ್ಲಿಯೇ ವಾಸ ಮಾಡುತ್ತಿದ್ದರು. ಕರೆ ಮಾಡಿ ತಿಳಿಸಿದ ನಮ್ಮ ಸಂಬಂಧಿಕರು ಯಾರೆಂದು ನೆನಪಿಲ್ಲ. ನನಗೆ ಕರೆ ಬಂದಾಗ ಬೆಳಿಗ್ಗೆ 9 ರಿಂದ 10 ಗಂಟೆ ಸಮಯ ಆಗಿತ್ತು. ನಾನು ಗೂಲಹಳ್ಳಿಗೆ ಮಧ್ಯಾಹ್ನ 12 ರಿಂದ 1 ಗಂಟೆ ಸಮಯಕ್ಕೆ ಬಂದಿರುತ್ತೇನೆ. ನನಗೆ ವಿಚಾರ ತಿಳಿಸಿದ ಸ್ಥಳೀಯರ ಹೆಸರು ದೇವರಾಜು. ನಾನು ಗೂಲಹಳ್ಳಿ ಗ್ರಾಮಕ್ಕೆ ವರ್ಷಕ್ಕೆ ಒಮ್ಮೆ ಹೋಗುತ್ತಿದ್ದೆ. ನನಗೆ ಗೂಲಹಳ್ಳಿ ಗ್ರಾಮದಲ್ಲಿ ಬೇರೆ ಯಾರೂ ಪರಿಚಯ ಇರುವುದಿಲ್ಲ. ಆರೋಪಿತರು ನನಗೆ ಯಾರು ಎಂದು ಪರಿಚಯ ಇರುವುದಿಲ್ಲ. ಯಾವ ವಿಚಾರಕ್ಕೆ ಆರೋಪಿತರು ಮತ್ತು ಮೃತನ ನಡುವೆ ಗಲಾಟೆಯಾಗಿತ್ತು ಎಂದು ಗೊತ್ತಿಲ್ಲ. ಯಾವ ಕಾರಣಕ್ಕೆ ಗಲಾಟೆಯಾಗಿರುತ್ತದೆ ಎಂದು ನಾನು ಯಾರಿಗೆ ಕೇಳಿದರೂ ಸಹ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ. ಆರೋಪಿತರ ಮತ್ತು ಮೃತನ ನಡುವೆ ಗಲಾಟೆಯಾಗಲು ಯಾವುದೇ ಕಾರಣ ಇಲ್ಲವಾದ್ದರಿಂದ ಸ್ಥಳೀಯರು ನನಗೆ ಗಲಾಟೆ ಆಗಿರುತ್ತದೆ ಎಂದು ತಿಳಿಸಿಲ್ಲ ಎಂದರೆ ಸರಿಯಲ್ಲ.

4) ಚೀಟಿಯ ಚೂರು ಚೂರುಗಳು ಚರಂಡಿಯಲ್ಲಿದ್ದು ಅವುಗಳನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿರುತ್ತಾರೆ. ಆ ರೀತಿ ಚೂರುಗಳನ್ನು ವಶಕ್ಕೆ ತೆಗೆದುಕೊಂಡಾಗ ನಾನು ಇರಲಿಲ್ಲ, ಆದರೆ ಚೀಟಿಯ ಚೂರುಗಳು ಪೊಲೀಸ್ ಪೇದೆಯವರ ಹತ್ತಿರ ಇತ್ತು. ಚೀಟಿಯ ಚೂರುಗಳು ತೇವ ಆಗಿರಲಿಲ್ಲ. ಮೃತ ಸಂಜೀವರಾಯಪ್ಪರವರ ಮನೆಯ 3 ದಿಕ್ಕಿನಲ್ಲಿ ಚರಂಡಿ ಇರುತ್ತದೆ. ಲಕ್ಷ್ಮೀನಾರಾಯಣಪ್ಪರವರು ಯಾವುದೇ ಚೀಟಿಯನ್ನು ಓದಿರುವುದಿಲ್ಲ ಮತ್ತು ಹರಿದು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಮೃತನ ಸಾವಿಗೆ ಆತನ ಕುಟುಂಬದ ಸದಸ್ಯರೇ ಕಾರಣ ಎಂದರೆ ಸರಿಯಲ್ಲ. ಮೃತನ ಸಾವಿಗೆ ಆರೋಪಿತರು ಕಾರಣರಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತನ್ನು ಕೇಳಿಕೊಂಡು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ